# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್ ರಸ್ತೆ, ತುಮಕೂರು -572103

ಸಂಖ್ಯೆ:ತುವಿ:ಶೈವಿ:2025–26:2218 ದಿನಾಂಕ:24.10.2025

## ಕೌನ್ಸಿಲಿಂಗ್‌ಗೆ ಬರುವ ವಿದ್ಯಾರ್ಥಿಗಳಿಗೆ ಸೂಚನೆ

1. ದಿನಾಂಕ:15.11.2025 ರಂದು ಬೆಳಿಗ್ಗೆ 10.00 ಗಂಟೆಗೆ ವಿಭಾಗಗಳ ಮಟ್ಟದಲ್ಲಿ ಕೌನ್ಸಿಲಿಂಗ್ ನಡೆಸಲಾಗುವುದು, ಕೌನ್ಸಿಲಿಂಗ್ ನಡೆಯುವ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಏನಾದರೂ ಬದಲಾವಣೆ ಇದ್ದಲ್ಲಿ ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸಲಾಗುವುದು, ಈ ಕುರಿತು ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಮಾಹಿತಿ ನೀಡಲಾಗುವುದಿಲ್ಲ. ಆದ್ದರಿಂದ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಜಾಲತಾಣ/ ವಿಭಾಗಗಳೊಂದಿಗೆ ಸಂಪರ್ಕದಲ್ಲಿರತಕ್ಕದ್ದು.
2. ಕೌನ್ಸಿಲಿಂಗ್‌ಗೆ ಹಾಜರಾಗುವ ವಿದ್ಯಾರ್ಥಿಗಳು ಯುಯುಸಿಎಂಎಸ್/ ಆಫ್‌ಲೈನ್‌ನಲ್ಲಿ ಸಲ್ಲಿಸಿರುವ ಅರ್ಜಿಯ ಒಂದು Hard Copy ಯನ್ನು ತರತಕ್ಕದ್ದು.
3. ಎಲ್ಲಾ ಮೂಲ ದಾಖಲಾತಿ, ಪಾಸ್ ಪೋರ್ಟ್ ಸೈಜ್ ಪೋಟೋ (5) ಹಾಗೂ ಎಲ್ಲಾ ದಾಖಲಾತಿಗಳ ಎರಡು ಸೆಟ್ ದೃಢೀಕೃತ ಜೆರಾಕ್ಸ್ ಪ್ರತಿ ತರತಕ್ಕದ್ದು.
4. ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸಿರುವ Fee Structure ಮತ್ತು ಲಭ್ಯವಿರುವ ಸೀಟುಗಳನ್ನು ಪರಿಶೀಲಿಸಿ ಸಿದ್ದರಾಗಿ ಬರತಕ್ಕದ್ದು.
5. **ಪ್ರವೇಶ ಪಡೆದ ನಂತರ ಪ್ರವೇಶ ಶುಲ್ಕವನ್ನು SB Collect ಮುಖಾಂತರ ಪಾವತಿಸಬೇಕಾಗಿರುವುದರಿಂದ ಆದಷ್ಟು ತಮ್ಮ ಬ್ಯಾಂಕ್ ಖಾತೆಯಿಂದಲೇ ಪಾವತಿಸಿ ಚಲನ್ ತರತಕ್ಕದ್ದು.**
6. ಪ್ರವೇಶಾತಿ ಶುಲ್ಕ ಹಾಗೂ ವಿಶ್ವವಿದ್ಯಾನಿಲಯವು ನಿಗಧಿಪಡಿಸುವ ಇನ್ನಿತರೆ ಯಾವುದೇ ಶುಲ್ಕಗಳನ್ನು ಕಡ್ಡಾಯವಾಗಿ SB Collect ಮುಖಾಂತರವೇ ಪಾವತಿಸತಕ್ಕದ್ದು. ಯುಯುಸಿಎಂಎಸ್ ಆನ್‌ಲೈನ್ ಲಿಂಕ್ ಮೂಲಕ ಹಾಗೂ ಯಾವುದೇ ತರಹದ QR Code Scanner ಮೂಲಕ ಪಾವತಿಸಿದ್ದಲ್ಲಿ ಅಂತಹ ಶುಲ್ಕಗಳನ್ನು ಪರಿಗಣಿಸಲಾಗುವುದಿಲ್ಲ.
7. ಕೌನ್ಸಿಲಿಂಗ್ ನಂತರ ಪ್ರವೇಶಾತಿ ಪಡೆದ ವಿಭಾಗದಿಂದ Antiranging Form, TC Form ಹಾಗೂ ಇನ್ನಿತರೆ ನಮೂನೆಗಳನ್ನು ಭರ್ತಿ ಮಾಡಿ ಸಂಬಂಧಪಟ್ಟ ವಿಭಾಗಕ್ಕೆ ಸಲ್ಲಿಸತಕ್ಕದ್ದು.
8. ಪ್ರವೇಶಾತಿ ಹಾಗೂ ಇನ್ನಿತರೆ ಯಾವುದೇ ವಿಷಯಗಳ ಮಾಹಿತಿ ಅಗತ್ಯವಿದ್ದಲ್ಲಿ/ ಸಂದೇಹಗಳಿದ್ದಲ್ಲಿ ಕೌನ್ಸಿಲಿಂಗ್ ದಿನದಂದೇ ಸಂಬಂಧಿಸಿದ ವಿಭಾಗ/ ಕೋರ್ಸುಗಳ ಮುಖ್ಯಸ್ಥರು/ ಸಂಯೋಜಕರಿಂದ ಪಡೆಯತಕ್ಕದ್ದು/ ಬಗೆಹರಿಸಿಕೊಳ್ಳತಕ್ಕದ್ದು.
9. ತರಗತಿಗಳು ಪ್ರಾರಂಭವಾಗುವ ದಿನಾಂಕದ ಮಾಹಿತಿಯನ್ನು ಕೌನ್ಸಿಲಿಂಗ್ ದಿನದಂದು ನೀಡಲಾಗುವುದು.

ಉಪಕುಲಸಚಿವರು
ಉಪಕುಲಸಚಿವರು
ಶೈಕ್ಷಣಿಕ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಪ್ರತಿಗಳು:

1. ಅಧ್ಯಕ್ಷರು/ ಸಂಯೋಜಕರು ಸಂಬಂಧಿಸಿದ ಸ್ನಾತಕೋತ್ತರ/ ಪಿಜಿ ಡಿಪ್ಲೋಮೋ/ ಡಿಪ್ಲೋಮೋ ಕೋರ್ಸುಗಳು ತುಮಕೂರು ವಿಶ್ವವಿದ್ಯಾನಿಲಯ ತುಮಕೂರು.
2. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ ತುಮಕೂರು– ಇಂದೇ ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸತಕ್ಕದ್ದು.
3. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಕಛೇರಿ ಪ್ರತಿ.